# ಸಂತ ಜ್ಞಾನೇಶ್ವರರು

ಎನ್. ಗೋಪೀನಾಥ

ಮಹಾರಾಷ್ಟ್ರದ ಸಂತಶ್ರೇಷ್ಠರಾದ ಜ್ಞಾನೇಶ್ವರರು ಜನಿಸಿದುದು ಶ್ರೀಕೃಷ್ಣಜನ್ಮಾಷ್ಟಮಿಯಂದು. ಅವರ ಇಪ್ಪತ್ತೊಂದೇ ವಯಸ್ಸಿನ ಸಂಕ್ಷಿಪ್ತ ಜೀವನದ, ಆದರೆ ಮಹತ್ ಸಾಧನೆಯ ಪಕ್ಷಿನೋಟವನ್ನು ಈ ಲೇಖನ ನೀಡುತ್ತದೆ. ಶ್ರೀ ಗೋಪೀನಾಥ ಅವರು ತಮ್ಮ ಲೇಖನಗಳ ಮೂಲಕ ಈಗಾಗಲೇ 'ವಿವೇಕಪ್ರಭ' ಓದುಗರಿಗೆ ಪರಿಚಿತರಾಗಿದ್ದಾರೆ.



**ಕ್ರಿ.ಶ.** ೧೨೮೭. ಮಹಾರಾಷ್ಟ್ರದ ಆಲಂದಿ ಎಂಬ ಹಳ್ಳಿಯಲ್ಲಿ. ಬ್ರಾಹ್ಮಣ ಕುಟುಂಬವೊಂದು ಸ್ಥಳೀಯ ಸಂಪ್ರದಾಯವಾದಿ ಬ್ರಾಹ್ಮಣರಿಂದ ಬಹಿಷ್ಕೃತಗೊಂಡು, ತೀವ್ರವಾಗಿ ಶೋಷಿಸಲ್ಪಡುತ್ತಿತ್ತು. ಕಾರಣ, ಯಜಮಾನನಾದ ವಿಠಲಪಂತನು ಸಂಸಾರಿಯಾಗಿ ನಂತರ ಸಂನ್ಯಾಸ ಪಡೆದು, ಮತ್ತೆ ಸಂಸಾರಕ್ಕೆ ಹಿಂತಿರುಗಿ ನಾಲ್ಕು ಮಕ್ಕಳನ್ನು (ಮೂರು ಗಂಡು, ಒಂದು ಹೆಣ್ಣು)ಪಡೆದಿದ್ದು! ಈಗಾಗಲೇ ತಂದೆತಾಯಿಯರು ಕಾಲವಾಗಿದ್ದರೂ ಮಕ್ಕಳ ಶೋಷಣೆ ನಡೆದೇ ಇತ್ತು. ಒಂದು ದಿನ ಎರಡನೆ ಮಗನಾದ ಯುವಕ ಜ್ಞಾನದೇವ ಬೇಸರಗೊಂಡು, ಕೋಣೆಯ ಒಳಗೆ ಹೋಗಿ ಬಾಗಿಲು ಹಾಕಿಕೊಂಡು ಧ್ಯಾನಕ್ಕೆ ಕುಳಿತನು. ಅಣ್ಣಂದಿರಾದ ನಿವೃತ್ತಿನಾಥ ಮತ್ತು ಸೋಪಾನ ಬಾಗಿಲು ತೆರೆಯಲು ಪರಿಪರಿಯಾಗಿ ಕೇಳಿಕೊಂಡರೂ ತೆಗೆಯಲಿಲ್ಲ. ಕೊನೆಗೆ ತಂಗಿ ಮುಕ್ತಾಬಾಯಿ ಬಾಗಿಲ ಮುಂದೆ ನಿಂತು, ಅರ್ಥಪೂರ್ಣ ಭಾವನೆಗಳನ್ನು ಸೂಸುವ ಅಭಂಗ (ಮರಾಠಿ ಹಾಡು)ಗಳನ್ನು ಹಾಡಿ ಬೇಡಿದಳು : "ಓ ಅಣ್ಣ, ಇಳೆಯು ಕೋಪಗೊಂಡು ದಾವಾನಲದಂತೆ ತಾಪಿತಗೊಂಡರೆ, ನಾವು ಅದನ್ನು ಉಪಶಮನಗೊಳಿಸುವ ನೀರಿನಂತೆ ಸಂತೋಷದಿಂದ ಇರಬೇಕು. ಮೃದುಹೃದಯಿಯಾದ ಯೋಗಿಯು ಜನರ ತಪ್ಪುಗಳನ್ನು ಕ್ಷಮಿಸುತ್ತಾನೆ. ನಮ್ಮ ನಾಲಿಗೆಯು ಹಲ್ಲಿನೊಳಗೆ ಸಿಕ್ಕಿಕೊಂಡರೆ, ಯಾರಾದರೂ ಹಲ್ಲುಗಳನ್ನೇ ಕಿತ್ತುಬಿಸುಡುತ್ತಾರೆಯೇ? ದಯವಿಟ್ಟು, ಇದನ್ನು ಕೇಳಿ ಶಾಂತನಾಗಿ ಬಾಗಿಲು ತೆರೆ. ನನ್ನ ಅಣ್ಣ! ನಾವು ಮಾಯೆಯಿಂದ ಪಾರಾಗಿ, ಪ್ರಪಂಚವನ್ನೆ ಉದ್ಧಾರ ಮಾಡೋಣ. ಆದ್ದರಿಂದ ದಯವಿಟ್ಟು, ಬಾಗಿಲು ತೆರೆ!"

ಇನ್ನೊಂದರ್ಥದಲ್ಲಿ ಸಾಧುಸ್ವಭಾವದ ಮುಕ್ತಾಬಾಯಿ ತನ್ನ ಅಣ್ಣನನ್ನು ಮೋಕ್ಷದ ದ್ವಾರವನ್ನು ಜಗದ ಜನರೆಲ್ಲರಿಗಾಗಿ ತೆರೆಯಲು ಕೇಳಿಕೊಂಡಳೆ? ಹಾಗಿದ್ದರೆ ಯಾರು ಈ ಜ್ಞಾನದೇವರು?

ಈಗಿನ ಮಹಾರಾಷ್ಟ್ರದ ಅಪೆಗಾಂವ್ ಎಂಬಲ್ಲಿ ವಾಸವಾಗಿದ್ದ ವಿಠಲಪಂತನು ಜ್ಞಾನದೇವನ ತಂದೆ; ತಾಯಿ ಆಲಂದಿಯ ಸಿದ್ಧೋಪಂತನ ಮಗಳಾದ ರುಕ್ಮಿಣಿ. ವಿವಾಹವಾದ ನಂತರ ಪಂತನ ತಂದೆ ತಾಯಿಗಳು ಕಾಲವಾಗಲು, ಇದರಿಂದ ತೀವ್ರ ವೈರಾಗ್ಯ ಹೊಂದಿದ ಆತನು ಯಾರಿಗೂ ತಿಳಿಸದೆ ಮನೆಯಿಂದ ಹೊರಟು, ತೀರ್ಥಯಾತ್ರೆ ಮಾಡುತ್ತ ವಾರಣಾಸಿ (ಕಾಶಿ)ಗೆ ಬಂದು, ಅಲ್ಲಿ ಸ್ವಾಮಿ ರಾಮಾನಂದರಿಗೆ (ಅಥವಾ ಶ್ರೀಧರಸ್ವಾಮಿ)ಶರಣಾಗಿ—ತನ್ನ ವಿವಾಹದ ವಿಷಯವನ್ನು ಮರೆಮಾಚಿ—ಅವರಿಂದ ಸಂನ್ಯಾಸ ಪಡೆದು "ಚೈತನ್ಯ ಶರ್ಮ"ನೆಂದು ಹೆಸರುಪಡೆದು ಅಲ್ಲಿಯೇ ವಾಸಿಸತೊಡಗಿದನು. ನಂತರ ಧರ್ಮಕರ್ಮಸಂಯೋಗದಿಂದ ಪರ್ಯಟನೆ ಮಾಡುತ್ತ ಬಂದ ರಾಮಾನಂದರು (ಆಲಂದಿಗೆ ಬಂದು ತನ್ನ ತಂದೆಯ ಮನೆಯಲ್ಲಿದ್ದು) ನಿರಾಶಳಾಗಿ ವ್ರತೋಪವಾಸ ನಿರತಳಾದ ರುಕ್ಮಿಣಿಯನ್ನು ಒಂದು ಅಶ್ವತ್ಥ ಮರದ ಬಳಿ ಸಂಧಿಸಿ, ಅವಳಿಂದ ಎಲ್ಲ ವಿಚಾರ ತಿಳಿದು, ಅವಳ ಮತ್ತು ಅವಳ ತಂದೆಯನ್ನು ಕಾಶಿಗೆ ಕರೆದುಕೊಂಡು ಬಂದು, ತಮ್ಮ ಶಿಷ್ಯ ಚೈತನ್ಯಶರ್ಮ (ವಿಠಲ ಪಂತ)ನಿಗೆ ಸಂಸಾರಕ್ಕೆ ಹಿಂದಿರುಗಲು ಆಜ್ಞಾಪಿಸಿದರು. ತನ್ನ ಇಚ್ಛೆಗೆ ವಿರೋಧವಾಗಿ, ಹಾಗೂ ಗುರ್ವಾಜ್ಞೆಯನ್ನು ಮೀರಲಾಗದೆ, ವಿಠಲಪಂತನು ಪತ್ನಿ ಮಾವನವರೊಂದಿಗೆ ಆಲಂದಿಗೆ ಹಿಂದಿರುಗಿದನು.

ಆದರೆ ಸ್ಥಳೀಯ ಕರ್ಮಠ ಬ್ರಾಹ್ಮಣರು ಅವನ ನಡತೆಯನ್ನು ಒಪ್ಪದೆ, ಅವನನ್ನು ಜಾತಿಯಿಂದ ಬಹಿಷ್ಕರಿಸಿದ್ದಲ್ಲದೆ, ಅಲ್ಲಿ ಇರಲು ಸಹ ಬಿಡದಿರಲು, ನಿರುಪಾಯನಾಗಿ ಸಂಸಾರ

ಸಮೇತನಾಗಿ ಸಿದ್ಧ ಬೇಟ್ ಎಂಬಲ್ಲಿಗೆ ಬಂದು ವಾಸಿಸತೊಡಗಿದನು. ಅಲ್ಲಿ ಅವನಿಗೆ ನಾಲ್ಕು ಮಕ್ಕಳು—ನಿವೃತ್ತಿ (ಕ್ರಿ.ಶ. ೧೨೭೩), ಜ್ಞಾನದೇವ (೧೨೭೫ರ ಕೃಷ್ಣ ಜನ್ಮಾಷ್ಟಮಿಯಂದು), ಸೋಪಾನ (೧೨೭೭) ಮತ್ತು ಮುಕ್ತಾಬಾಯಿ (೧೨೭೯)—ಹುಟ್ಟಿದರು.

ಮಕ್ಕಳಿಗೆ ಹೆಸರಿಡುವುದರಲ್ಲಿಯೂ ಅವನ ಮನಸ್ಸಿನ ಪಕ್ವತೆಯ ಅರಿವಾಗುತ್ತದೆ. ಭಗವತ್ಸಾಕ್ಷಾತ್ಕಾರಕ್ಕೆ ಕ್ರಮವಾದ ಮಾರ್ಗಗಳು ಮಕ್ಕಳ ಹೆಸರಿನಲ್ಲಿ ಬಿಂಬಿತವಾಗಿವೆ. ನಿವೃತ್ತಿ (ತ್ಯಾಗ ಅಥವಾ ವೈರಾಗ್ಯ), ಜ್ಞಾನದೇವ (ಜ್ಞಾನ), ಸೋಪಾನ (ಏರುವ ಮೆಟ್ಟಿಲು) ಮತ್ತು ಮುಕ್ತಿ (ಬಂಧನಗಳಿಂದ ಬಿಡುಗಡೆ).

ಒಂದು ತರಹದ ಕಷ್ಟಜೀವನವನ್ನೇ ನಡೆಸುತ್ತಿದ್ದ ವಿಠಲ ಪಂತನು ಹೆಂಡತಿ ಮಕ್ಕಳೊಂದಿಗೆ ತ್ರ್ಯಂಬಕೇಶ್ವರಕ್ಕೆ ತೀರ್ಥಯಾತ್ರೆ ಹೊರಟನು. ಒಂದು ದಿನ ಅಲ್ಲಿನ ಬ್ರಹ್ಮಗಿರಿಯನ್ನು ಪ್ರದಕ್ಷಿಣೆ ಮಾಡುತ್ತಿರುವಾಗ, ಭಯಂಕರ ಬಿರುಗಾಳಿಯಿಂದ ಕೂಡಿದ ಮಳೆ ಬಂದದ್ದಲ್ಲದೆ, ಹತ್ತಿರದಲ್ಲಿಯೇ, ಹುಲಿಯ ಘರ್ಜನೆಯೂ ಕೇಳಿಬಂತು. ಜೀವಭಯದಿಂದ ಎಲ್ಲರೂ ದಿಕ್ಕೆಟ್ಟು ಆಶ್ರಯಕ್ಕಾಗಿ ಸಿಕ್ಕಿದ ಕಡೆಗೆ ಓಡಿದಾಗ, ನಿವೃತ್ತಿಯು ಕಾಣದಾದನು. ಬಾಲಕನು, ದಾರಿತಪ್ಪಿ, ಗಹಿನಿನಾಥರೆಂಬ ಯೋಗಿಯು ವಾಸಿಸುತ್ತಿದ್ದ ಗುಹೆಗೆ ಬಂದನು. ನೋಟಮಾತ್ರದಿಂದಲೇ ಅವನ ಅಂತಸ್ಸತ್ವದ ಯೋಗ್ಯತೆಯನ್ನು ಅರಿತ ಅವರು ಆತನಿಗೆ ದೀಕ್ಷೆ ನೀಡಿ, ಯೋಗ ವಿದ್ಯೆಯನ್ನು ಬೋಧಿಸಿದರು. ಕೂಡಲೆ ಬಾಲಕನಿಗೆ ಅನಂತ ದೈವತ್ವದ ಬಾಹ್ಯಾಂತರದ ಅನುಭವವಾಯಿತು. ಆಗ ಅವನಿಗೆ ಹತ್ತು ವರ್ಷ ಮಾತ್ರ! ಅವನ ಪೂರ್ಣ ವ್ಯಕ್ತಿತ್ವವೇ ಬದಲಾವಣೆ ಗೊಂಡು ಸಂತತ್ವಕ್ಕೇರಿತು. (ನಿವೃತ್ತಿನಾಥನೆಂದು ಹೆಸರುವಾಸಿಯಾಗಿ, ಮುಂದೆ ನಾಥ ಸಂಪ್ರದಾಯದ ಪ್ರವರ್ತಕನಾದನು.) ಕೆಲವೇ ದಿನಗಳಲ್ಲಿ ತನ್ನನ್ನು ಅರಸುತ್ತಿದ್ದ ತಂದೆ ತಾಯಿಯರನ್ನು ಸೇರಿಕೊಂಡನು.

ಆದರೆ ಮೇಲೆ ಹೇಳಿದಂತಹ ಅಭೂತಪೂರ್ವ ಘಟನೆ ಜರುಗಿದಮೇಲೂ ಆಲಂದಿಯ ಬಾಹ್ಯಾಚಾರಭ್ರಾಂತ ಬ್ರಾಹ್ಮಣರ ಮನೋಭಾವವು ಬದಲಾಗಲೇ ಇಲ್ಲ. ಬಹಿಷ್ಕಾರ ಹಿಂತೆಗೆದುಕೊಳ್ಳುವ ವಿಠಲಪಂತನ ಬೇಡಿಕೆಯನ್ನು ಅವರು ಸಾರಾಸಗಟಾಗಿ ತಿರಸ್ಕರಿಸಿದರಲ್ಲದೆ ಪ್ರಾಯಶ್ಚಿತ್ತರೂಪವಾಗಿ ಗಂಡ ಹೆಂಡಂದಿರು ಪ್ರಯಾಗ ಗಂಗಾನದಿಯಲ್ಲಿ ಮುಳುಗಿ ದೇಹ ತ್ಯಜಿಸಲು ಹೇಳಿದರು. ಅಕಟಾ! ಏನೀ ವಿಧಿ ಪರೀಕ್ಷೆ? ಇದೇ ಈ ಜಗತ್ತಿನ ಕ್ರೂರ ನೀತಿಯೇನು? ಯಾರು ಹೇಳಬಲ್ಲರು? ಮಕ್ಕಳ ಭವಿಷ್ಯದ ಬಗ್ಗೆಯೇ ಚಿಂತಿಸುತ್ತ ಸಾತ್ವಿಕ ದಂಪತಿಗಳಾದ ವಿಠಲ ಪಂತ ಮತ್ತು ರುಕ್ಮಿಣಿಯರು, ನಿರುಪಾಯರಾಗಿ ಪ್ರಯಾಗದಲ್ಲಿ ಗಂಗೆಯಲ್ಲಿ ದೇಹತ್ಯಾಗ ಮಾಡಿದರು! ಆಲಂದಿಯಲ್ಲಿ ಮಕ್ಕಳಿಗೆ ಶ್ರೀಭಗವಂತನಲ್ಲದೆ ಬೇರೆ ಯಾರೂ ಗತಿಯಿಲ್ಲದಂತಾಯಿತು. ನಿವೃತ್ತಿನಾಥನು ಜ್ಞಾನದೇವನಿಗೆ, ಆತನು ಸೋಪಾನನಿಗೆ, ಸೋಪಾನನು ಮುಕ್ತಾಬಾಯಿಗೆ, ಕ್ರಮಾನುಗತವಾಗಿ ದೀಕ್ಷೆ ಕೊಟ್ಟರು. ನಂತರ ಎಲ್ಲರೂ ಕಠೋರ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದರು. ಅವರು ಎಲ್ಲಿ ಸಾಧನೆಗಳನ್ನು ಮಾಡಿದರು ಮತ್ತು ಹೇಗೆ ಅತ್ಯುನ್ನತ ದೈವೀ ಸಾಕ್ಷಾತ್ಕಾರ ಪಡೆದರು ಎಂಬುದರ ವಿವರಗಳು ತಿಳಿದು ಬಂದಿಲ್ಲವಾದರೂ, ಅವರ ಮುಂದಿನ ಜೀವನದ ಘಟನೆಗಳಿಂದ ಮತ್ತು ಅವರು ರಚಿಸಿದ ಅಭಂಗಗಳಿಂದ, ಅವರ ಸಾಕ್ಷಾತ್ಕಾರದ ಎತ್ತರದ ಪರಿಚಯವಾಗುತ್ತದೆ.

ಸಜ್ಜನರನ್ನು ಪೀಡಿಸಿ ಅದರಿಂದಲೇ ಆನಂದ ಪಡುತ್ತಿದ್ದ ವಿಸೋಬಾ ಚಾಟಿಯೆಂಬ ದುಷ್ಟವ್ಯಕ್ತಿಯಿದ್ದ. ಆತ ಒಂದು ವಿಶೇಷ ಸಂದರ್ಭದಲ್ಲಿ, ಮುಕ್ತಾಬಾಯಿ ಹಾಗೂ ಜ್ಞಾನದೇವರಿಗೆ ತೊಂದರೆ ಕೊಡಲು ಹೋದನು. ಜ್ಞಾನದೇವರ ವಿಶೇಷ ಯೋಗಶಕ್ತಿಯನ್ನು ಕಂಡು ಪರಾಜಿತನಾಗಿ, ಆತನ ಆಜ್ಞೆಯಂತೆ ಮುಕ್ತಾಬಾಯಿಗೆ ಶರಣಾಗಿ, ಅವಳಿಂದ ದೀಕ್ಷೆ ಪಡೆದು, ಪುನೀತನಾಗಿ ಪ್ರಖ್ಯಾತ ಸಂತನಾದ. ಎಷ್ಟರಮಟ್ಟಿಗೆ ಅಂದರೆ, ಮುಂದೊಂದು ದಿನ ಮಹಾರಾಷ್ಟ್ರದ ಇನ್ನೊಬ್ಬ ಪ್ರಖ್ಯಾತ ಸಂತರಾದ ನಾಮದೇವರು, ಜ್ಞಾನದೇವರನ್ನು ಪ್ರಾರ್ಥಿಸಲು, ಅವರು ನಾಮದೇವರಿಗೆ ವಿಸೋಬರಿಂದ ದೀಕ್ಷೆ ಕೊಡಿಸಿದರು.

ಈಗ ಪರಿಸ್ಥಿತಿ ಸ್ವಲ್ಪ ಸುಧಾರಿಸಿ, ಸ್ಥಳೀಯರು ಅವರನ್ನು ಗೌರವದಿಂದ ಕಾಣತೊಡಗಿದರಾದರೂ ಬ್ರಾಹ್ಮಣ ಸಮುದಾಯ ವಿಠಲಪಂತನ ಮಕ್ಕಳನ್ನು ಮತ್ತೆ ಜಾತಿಗೆ ಸೇರಿಸಿಕೊಳ್ಳಲೊಪ್ಪಲಿಲ್ಲ. ಆಲಂದಿಯ ಓರ್ವ ಸಾತ್ವಿಕ ಬ್ರಾಹ್ಮಣನು ನಿವೃತ್ತಿ ಹಾಗೂ ಜ್ಞಾನದೇವರಿಗೆ—ಆ ಕಾಲದಲ್ಲಿ ಪಂಡಿತರು ಹಾಗೂ ಸುಸಂಸ್ಕೃತ ಬ್ರಾಹ್ಮಣರ ಬೀಡೆಂದು ಹೆಸರಾಗಿದ್ದ—ಪೈಠಣ (ಪ್ರತಿಷ್ಠಾನ)ಕ್ಕೆ ಹೋಗಿ ಅಲ್ಲಿನ ಬ್ರಾಹ್ಮಣ ಪಂಡಿತರಿಂದ ಶುದ್ಧೀಕರಣ ಪತ್ರ ತರಲು ತಿಳಿಸಿದನು. ಅದರಂತೆ ನಾಲ್ವರೂ (ಪ್ರಾಯಶಃ ಕ್ರಿ.ಶ. ೧೨೮೭ರಲ್ಲಿ) ಪೈಠಣಕ್ಕೆ ಹೋದರು. ಕೆಲವು ಸಂಪ್ರದಾಯಸ್ಥ ಬ್ರಾಹ್ಮಣ ಪಂಡಿತರು ಅವರನ್ನು ಪಾಟೀಸವಾಲಿಗೊಳಪಡಿಸಿ ಬಾಲಕರು ಜ್ಞಾನದಲ್ಲೂ ಅನುಭವದಲ್ಲೂ ತಮ್ಮನ್ನೇ ಮೀರಿರುವರೆಂದು ಅರಿತರು.

ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರೂ, ಹಾಗೂ ರಾಮಕೃಷ್ಣ ಮಹಾಸಂಘದ ಎರಡನೆ ಅಧ್ಯಕ್ಷರೂ ಆಗಿದ್ದ ("ಮಹಾಪುರುಷ"ರೆಂದು ಪ್ರಖ್ಯಾತರಾದ) ಸ್ವಾಮಿ ಶಿವಾನಂದರು, "ಅವತಾರ ಪುರುಷರು ಹಾಗೂ ಮುಕ್ತ ಪುರುಷರು, ಜನಸಾಮಾನ್ಯರಲ್ಲಿ ದೈವೀ ಶ್ರದ್ಧೆ ಮೂಡಿಸಲು ಮತ್ತು ಅಹಂಕಾರಿಗಳ ಗರ್ವವನ್ನು ಅಡಗಿಸಲು ಪವಾಡಗಳನ್ನು ಮಾಡುವುದು ಅಸಹಜವೇನಲ್ಲ; ಅದು ಅವರಿಗೆ ತೀರಾ ಸಾಮಾನ್ಯವಾಗಿರುತ್ತದೆ" ಎಂದು ಹೇಳಿರುತ್ತಾರೆ. ಜ್ಞಾನದೇವರೂ ಕೂಡ ತಮ್ಮ ಜೀವಿತಾವಧಿಯಲ್ಲಿ ಅನೇಕ ಪವಾಡಗಳನ್ನೆಸಗಿದರು. ಅವುಗಳನ್ನೆಲ್ಲ ಹೇಳಲು ಇದು ವೇದಿಕೆಯಲ್ಲವಾದರೂ, ಸಾಂದರ್ಭಿಕವಾಗಿ ಎರಡು ಘಟನೆಗಳನ್ನು ತಿಳಿಸಬಹುದು.

ಮೇಲೆ ಹೇಳಿದ ಸಂದರ್ಭದಲ್ಲಿ ಬ್ರಾಹ್ಮಣನೊಬ್ಬನು ಕುಹಕ

ದಿಂದ, ಜ್ಞಾನದೇವರನ್ನು ಕೇಳಿದನು: "ಜ್ಞಾನದೇವನೆಂದು ಹೆಸರನ್ನು ಇಟ್ಟುಕೊಂಡಿರುವ ನಿನಗೆ ಯಾವುದರ ಜ್ಞಾನವಿದೆ?"

ಅವರ ಉತ್ತರ : "ನನಗೆ ಈ ಜಗತ್ತಿನ ಜ್ಞಾನವಿದೆ. ನಾನೇ ಈ ಜಗತ್ತು—ಅಂದರೆ ನಾಮರೂಪವಾದ ಜನರು, ಪ್ರಾಣಿಗಳು, ಈ ಹಳ್ಳಿಯಲ್ಲಿನ ಸಮಸ್ತ ಜನರೂ, ನೀವು ಮತ್ತು ಪ್ರಾಣಿಗಳು ಎಲ್ಲವೂ ನಾನೇ ಆಗಿದ್ದೇನೆ." ಆಗ ಇನ್ನೂ ಕುಹಕದ ಪ್ರಶ್ನೆ: "ಹಾಗಾದರೆ, ತನ್ನ ಬೆನ್ನಿನ ಮೇಲೆ ಚರ್ಮದ ಚೀಲದಲ್ಲಿ ನೀರನ್ನು ಹೊತ್ತಿರುವ ಈ ಕೋಣವೂ ನಿನ್ನ ರೂಪವೇ! ಅದನ್ನೂ ಜ್ಞಾನದೇವನೆಂದು ನಾನು ಕರೆಯುತ್ತೇನೆ!" ಅದಕ್ಕೆ ಉತ್ತರ: "ಹೌದು, ಅದೂ ನನ್ನ ರೂಪವೇ!" ಇದನ್ನು ಕೇಳಿದ ಆ ಗರ್ವಿತನಾದ ಪಂಡಿತನು, ಕೋಣವನ್ನು ಸಭೆಯಲ್ಲಿದ್ದ ಜ್ಞಾನದೇವರ ಬಳಿ ಕರೆತಂದು ಅವರನ್ನೇ ವ್ಯಂಗ್ಯವಾಗಿ ನೋಡುತ್ತಾ, ಕೋಣದ ಬೆನ್ನಿನ ಮೇಲೆ ಚಾಟಿಯಿಂದ ನಾಲ್ಕಾರು ಬಾರಿ ಬಾರಿಸಿದನು. ಜ್ಞಾನದೇವರು ನೋವಿನಿಂದ "ಹ್ಹಾ!" ಎಂದು ಚೀರಿದರು. ಆಗ ನೆರೆದವರೆಲ್ಲರೂ ಅಚ್ಚರಿ ಪಡುವಂತೆ, ಜ್ಞಾನದೇವರ ಬೆನ್ನಿನ ಮೇಲೆ ಚಾಟಿ ಹೊಡೆತದ ಬಾಸುಂಡೆ ಗುರುತುಗಳು ಕಾಣಿಸಿದುವು! ಅವರು ಅದ್ವೈತ ಜ್ಞಾನದ ನೈಜ ಅನುಭವವನ್ನು ತೋರ್ಪಡಿಸಿದ ರೀತಿ ಇದು.

ಇದೇ ಸಭೆಯಲ್ಲಿ ಒಂದು ಕೋಣದಿಂದ ವೇದಮಂತ್ರವನ್ನು ಹೇಳಿಸುವಂತೆ ಕೇಳಲಾಯಿತು. ಜ್ಞಾನದೇವರು ಅದರ ತಲೆಯ ಮೇಲೆ ತಮ್ಮ ಬಲಹಸ್ತವನ್ನಿರಿಸಿ ಅದಕ್ಕೆ ವೇದಜ್ಞಾನವನ್ನು ಕರುಣಿಸಿದರು. ಅದು ಋಗ್ವೇದದ ಮೊದಲನೆ ಶ್ಲೋಕವನ್ನು ಪಠಿಸಿತು! ಮೂಕವದನರಾದ ಪಂಡಿತರೆಲ್ಲರೂ ಜ್ಞಾನದೇವರ ರೂಪದಲ್ಲಿ ಅವತೀರ್ಣವಾದ ಭಗವತ್‌ಶಕ್ತಿಯ ಸುಳಿವನ್ನು ಪಡೆದು, ಅವರ ಕಾಲಿಗೆರಗಿ, ತಮ್ಮ ಅಪರಾಧಕ್ಕೆ ಕ್ಷಮೆಕೋರಿ ಬೇಡಿಕೊಂಡರು. "ನೀವು ಅವತಾರ ಪುರುಷರು; ನಾವೇನು ನಿಮ್ಮ ಶುದ್ಧೀಕರಣ ಮಾಡೋಣ? ಈ ಜಗತ್ತಿನ ಬಂಧನಗಳಿಗೆ ನೀವು ಅತೀತರಾಗಿರುತ್ತೀರಿ. ನಮ್ಮನ್ನು ಹರಸಿ, ಉದ್ಧಾರ ಮಾಡಬೇಕೆಂಬುದೇ ನಮ್ಮ ಪ್ರಾರ್ಥನೆ!"

ಅಂದಿನಿಂದಲೇ ಜ್ಞಾನದೇವರೂ, ಅವರ ಸಹೋದರರೂ ಸಹೋದರಿಯೂ ಸಮಾಜದಲ್ಲಿ ಪ್ರಖ್ಯಾತರಾದರು. ಅವರೀಗ ಪೈಠಣದಿಂದ ಆಲಂದಿಗೆ ಮರುಪ್ರಯಾಣ ಹೊರಟರು. ದಾರಿಯಲ್ಲಿ ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯಲ್ಲಿ ಪ್ರವರಾ ನದಿಯ ದಂಡೆಯ ಮೇಲಿದ್ದ ನೇವಸಿಯಲ್ಲಿ ತಂಗಿದರು. ಅಲ್ಲಿನ ದೇವಿ ಮಹಾಮಾಯೆಯ ದೇವಸ್ಥಾನದಲ್ಲಿ ನಿವೃತ್ತಿನಾಥರು ಜ್ಞಾನದೇವರಿಗೆ ಮರಾಠಿಯಲ್ಲಿ ಭಗವದ್ಗೀತೆಯ ಮೇಲೆ ವಿವರಣೆಯನ್ನು ಬರೆಯಲು ಆಜ್ಞಾಪಿಸಿದರು. ಅದರಂತೆ ಜ್ಞಾನದೇವರು ಓವಿ ಛಂದಸ್ಸಿನಲ್ಲಿ ಗೀತಾ ವ್ಯಾಖ್ಯಾನವನ್ನು ಯಾವ ಪೂರ್ವಸಿದ್ಧತೆಯೂ ಇಲ್ಲದೆ ನೀಡತೊಡಗಿದರು. ಅವರ ಶಿಷ್ಯರಾದ ಸಚ್ಚಿದಾನಂದ ಬಾಬಾರವರು ಇದನ್ನು ಬರೆದುಕೊಂಡರು. ಸುಮಾರು ೯೦೦೦ ಶ್ಲೋಕಗಳುಳ್ಳ ಇದರ ಹೆಸರು ಭಾವಾರ್ಥದೀಪಿಕಾ ಎಂದು. ಗ್ರಾಮದ ಜನರು ಭಗವದ್ಗೀತೆಯ ಮೇಲಿನ ಅಷ್ಟೊಂದು ಸರಳ ಹಾಗೂ ಮಧುರ ಭಾಷ್ಯವಿವರಣೆಯನ್ನು ಕೇಳಿ ಆನಂದಪಟ್ಟರು. ನೇವಸಿಯಲ್ಲಿ ಕ್ರಿ.ಶ. ೧೨೯೦ರಲ್ಲಿ ರಚಿತವಾದ ಇದು ಜ್ಞಾನೇಶ್ವರೀ ಎಂದೇ ಪ್ರಖ್ಯಾತವಾಯಿತು. ಇಲ್ಲಿಂದ ಮುಂದೆ ಜ್ಞಾನದೇವರು ವಿದ್ಯಾಧಿದೇವತೆಯಾದ ಜ್ಞಾನೇಶ್ವರರೆಂದು ಕರೆಯಲ್ಪಟ್ಟರು. ಅವರ ಮೇರುಕೃತಿ ಜ್ಞಾನೇಶ್ವರಿಯು ಅವರ ಅಗಾಧಜ್ಞಾನವನ್ನು ಹೊರಗೆಡಹುವುದಲ್ಲದೆ, ಕಳೆದ ೭೦೦ ವರ್ಷಗಳಿಂದಲೂ ಅವಿಚ್ಛಿನ್ನ ಸ್ಫೂರ್ತಿಯ ನೆಲೆಯಾಗಿದೆ. ಅವರ ಭಗವದ್ಗೀತೆಯ ಗೂಢಾರ್ಥವನ್ನು ವಿವರಿಸುವ ರೂಪಕಗಳು, ಉಪಮೆಗಳು, ಹೋಲಿಕೆಗಳು ಹಿಂದೂ ಭಕ್ತಿಸಾಹಿತ್ಯದಲ್ಲಿ ಸರಿಸಾಟಿಯಿಲ್ಲದ್ದಾಗಿವೆ. ಪ್ರಚಾರಗೊಂಡಂದಿನಿಂದಲೂ ಜನರು ಇದನ್ನು ಭಕ್ತಿ ಶ್ರದ್ಧೆಯಿಂದ ಕಾಣುತ್ತಿದ್ದಾರೆ.

ಈ ಮೇರುಕೃತಿಯ ರಚನೆಯ ನಂತರ ಎಲ್ಲರೂ ಆಲಂದಿಗೆ ವಾಪಸು ಬಂದರು. ಅಲ್ಲೀಗ ಅವರಿಗೆ ಕರ್ಮಠರ ಕಾಟವಿರಲಿಲ್ಲ. ಎಲ್ಲರೂ ಅವರನ್ನು ದೇವಾಂಶ ಸಂಭೂತರೆಂದು ಗೌರವಿಸಿದರು. ನಂತರ ನಿವೃತ್ತಿನಾಥರು ಜ್ಞಾನದೇವರಿಗೆ ತಮ್ಮ ಅದ್ವೈತಾನುಭವದ ಮೇಲೆ ಸ್ವಂತಕೃತಿಯನ್ನು ರಚಿಸಲು ಆದೇಶಿಸಿದರು. ಅದರಂತೆ ಜ್ಞಾನದೇವರು "ಅನುಭವಾಮೃತ" ಎಂಬ ಗ್ರಂಥವನ್ನು ಬರೆದರು.

ವಿವಿಧ ತತ್ತ್ವಗಳ ಚರ್ಚೆಯಿಂದ ಸಂದಿಗ್ಧಗೊಂಡ ಜನರಿಗೆ, "ಅನುಭವಾಮೃತ"ವು ಒಂದು ದಾರಿದೀಪವೆಂದು ಸ್ವತಃ ಜ್ಞಾನೇಶ್ವರರೇ ಭಾವಿಸಿದ್ದರು. ದ್ವೈತಶಾಸ್ತ್ರದ ಮೇಲಿನ ಅನೇಕ ವಾದಗಳನ್ನು ಖಂಡಿಸಿ, ಅದ್ವೈತ ಪರತತ್ತ್ವದ ಅಸ್ತಿತ್ವವನ್ನು ನೆಲೆಗೊಳಿಸಿದರು.

ಸಹೋದರಿ ಮುಕ್ತಾಬಾಯಿಯಿಂದ ದೀಕ್ಷಿತನಾದ ಮತ್ತು ತಮ್ಮ ಅನುಯಾಯಿಯಾದ ಚಂಗದೇವನನ್ನು ಉದ್ದೇಶಿಸಿ ಚಾಂಗದೇವ ಪಶಿಷ್ಠಿ ಎಂಬ ೬೫ ಶ್ಲೋಕಗಳುಳ್ಳ ಗ್ರಂಥವನ್ನೂ ಅವರು ರಚಿಸಿರುವರು. ಭಗವಂತನ ಪಾದಪದ್ಮಗಳಲ್ಲಿ ಭಕ್ತಿಭಾವ ಹೊಂದಲು ಸಾಮಾನ್ಯ ಜನತೆಗೆ ಅನುಕೂಲವಾಗುವಂತೆ ಅನೇಕ ಅಭಂಗಗಳನ್ನೂ ಮತ್ತು ಹರಿಪಾಠಗಳನ್ನೂ ಬರೆದರು. "ರಾಮಕೃಷ್ಣ ಹರಿ" "ಜಯಜಯ ವಿಠಲ ಪಾಂಡುರಂಗ" ಎಂಬ ನಾಮಾವಳಿಗಳನ್ನು ಪಠಿಸಲು ಜನತೆಗೆ ಬೋಧಿಸಿದರು.

ಆ ಕಾಲದಲ್ಲಿ ಭೀಮಾನದಿಯ ದಡದ ಮೇಲಿದ್ದ ಪಂಢರಾಪುರವು ಪ್ರಖ್ಯಾತ ತೀರ್ಥಕ್ಷೇತ್ರವಾಗಿತ್ತು. ಜ್ಞಾನೇಶ್ವರರ ಸಮಕಾಲೀನರಾದ ಸಂತ ನಾಮದೇವ, ಭಕ್ತ ಘೋರ ಕುಂಬಾರ, ಅಂತ್ಯಜ ಚೋಕಮೇಳ, ದಾಸಿಯಾದ ಜಾನಾಬಾಯಿ, ಅಕ್ಕಸಾಲಿಗನಾದ ನರಹರಿ—ಇವರೆಲ್ಲರೂ ಅಲ್ಲಿ ವಾಸಿಸುತ್ತಾ, ವಿಠಲನ ಭಕ್ತಿಭಾವವನ್ನು ಜನರಲ್ಲಿ ಪ್ರಸರಿಸುತ್ತಿದ್ದರು. ಸಹಜವಾಗಿಯೇ ಜ್ಞಾನೇಶ್ವರರು, ಅಣ್ಣತಮ್ಮಂದಿರು ಹಾಗೂ ಸಹೋದರಿಯಿಂದೊಡಗೂಡಿ ಅಲ್ಲಿಗೆ ಹೋದರು. ಅದು ಇವರಿಗೆ ಜ್ಞಾನಯೋಗ ಹಾಗೂ ಭಕ್ತಿಪಥಗಳನ್ನು ಸಮನ್ವಯಗೊಳಿಸಲು ಸುವರ್ಣಾವಕಾಶವನ್ನೊದಗಿಸಿತು.

"ಹರಿಪಾಠ"ವೊಂದರಲ್ಲಿ ಅವರು ಹೇಳುತ್ತಾರೆ: "ಹರಿನಾಮವನ್ನು ದಯವಿಟ್ಟು ತೆಗೆದುಕೊಳ್ಳಿ; ಪುಣ್ಯ, ಸತ್ಕಾರ್ಯಗಳ ಬಗ್ಗೆ ಯೋಚಿಸದಿರಿ. ಅದರಿಂದ ಅನಂತ ಸುಖವನ್ನೂ ಅನಂತ ಆನಂದವನ್ನೂ ಮತ್ತು ಮುಕ್ತಿಯನ್ನೂ ಪಡೆಯುವಿರಿ." ಇಂದಿಗೂ ಕೂಡ ಅವರ ಅಭಂಗಗಳು ಮಹಾರಾಷ್ಟ್ರದಲ್ಲೆಲ್ಲಾ ಅತ್ಯಂತ ಭಕ್ತಿ ಮತ್ತು ಆನಂದದಿಂದ ಹಾಡಲ್ಪಡುತ್ತವೆ. "ವಾರಕರಿ" ಎಂಬ ಪಂಥ ಅವರ ಕಾಲದಲ್ಲಿ ಪ್ರಚಲಿತವಿತ್ತು. ಜ್ಞಾನೇಶ್ವರರು ಅದನ್ನು ವೈಚಾರಿಕ ಅಧ್ಯಾತ್ಮಯೋಗದೊಂದಿಗೆ ನವೋತ್ಸಾಹಗೊಳಿಸಿದರು.

ಕ್ರಿ.ಶ. ೧೨೯೬ರಲ್ಲಿ, ಜ್ಞಾನೇಶ್ವರರು ನಾಮದೇವಾದಿ ಸಂತರೊಡಗೂಡಿ, ಉತ್ತರಭಾರತ ಪ್ರವಾಸ ಕೈಗೊಂಡು ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ಎಲ್ಲೆಡೆಗಳಲ್ಲಿಯೂ ಜನರು ಅವರನ್ನು ಸಂಭ್ರಮದಿಂದ ಸ್ವಾಗತಿಸಿ, ಅವರ ಉಪದೇಶಗಳನ್ನು ಅತಿ ಶ್ರದ್ಧೆಯಿಂದ ಆಲಿಸಿದರು. ಅವರು ಹಿಂತಿರುಗಿ ಬಂದಾಗ ಅವರಿಗೆ ೨೧ ವರ್ಷಗಳು ಮಾತ್ರ ಆಗಿದ್ದವು!

ಈ ಭುವಿಯ ಮೇಲಿನ ತಮ್ಮ ಕಾರ್ಯವು ಮುಗಿಯಿತೆಂದು ಅರಿತುಕೊಂಡ ಅವರು, ಸಮಾಧಿಯೋಗದಿಂದ ದೇಹ ತ್ಯಜಿಸಲು ನಿರ್ಧರಿಸಿದರು. ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು ! ಅನೇಕ ಕಡೆಗಳಿಂದ ಸಾಧುಸಂತರು ಆಲಂದಿಗೆ ಬರಲಾರಂಭಿಸಿದರು. ತಾವು ಯಾವಾಗ ಸಮಾಧಿ ಹೊಂದುವರೆಂದು ಮುಂಚೆಯೆ ತಿಳಿಸಿದ್ದರು.

ಕ್ರಿ.ಶ. ೧೨೯೬ರ ಕಾರ್ತೀಕ ಕೃಷ್ಣ ತ್ರಯೋದಶಿಯಂದು ಯೋಗಾಸನದಲ್ಲಿ ಗುಂಡಿಯಲ್ಲಿ ಕುಳಿತ ಅವರು, ನಾಮದೇವರು ದೇಹಕ್ಕೆ ಚಂದನವನ್ನು ಸವರಲು, ಭಕ್ತರು ಹಾರಾಲಂಕಾರ ಮಾಡಿರಲು, ಅಖಂಡ ನಾಮಸಂಕೀರ್ತನೆಯನ್ನು ಕೇಳುತ್ತಾ ದೇಹವನ್ನು ತ್ಯಜಿಸಿದರು. ಹಿರಿಯ ಸಹೋದರ ನಿವೃತ್ತಿನಾಥರು, ನಿರ್ವಿಕಾರ ಚಿತ್ತದಿಂದ ಗುಂಡಿಯನ್ನು ಕಲ್ಲುಚಪ್ಪಡಿಯಿಂದ ಮುಚ್ಚಿದರು. ಈ ರೀತಿಯಲ್ಲಿ ಅವರು ೨೧ನೆ ವಯಸ್ಸಿನಲ್ಲಿಯೇ ದೇಹತ್ಯಾಗ ಮಾಡಿದರೂ ಜ್ಞಾನೇಶ್ವರೀ ರೂಪದಲ್ಲಿ ಅವರು ಹರಿಸಿದ ಅಧ್ಯಾತ್ಮ ಪ್ರವಾಹವು ಇಂದಿಗೂ ಅಜರಾಮರವಾಗಿದೆ. ಇದಾದ ಆರು ತಿಂಗಳ ಅವಧಿಯಲ್ಲಿಯೇ ನಿವೃತ್ತಿನಾಥರು, ಸೋಪಾನದೇವ, ಮುಕ್ತಾಬಾಯಿ ಹಾಗೂ ಯೋಗಿ ಚಂಗದೇವ—ಇವರೆಲ್ಲರೂ ಮೇಲೆ ಹೇಳಿದ ರೀತಿಯಲ್ಲಿಯೇ ಪ್ರಪಂಚ ತ್ಯಜಿಸಿದರು.

(ಆಧಾರ : ಆಂಗ್ಲ "ಪ್ರಬುದ್ಧ ಭಾರತ" ಜೂನ್, ೧೯೮೮)

## ಸಿಡಿಲ ಮರಿ

ಆಪೇಗಾಂವದಲ್ಲಿ ಒಮ್ಮೆ ವಿಶೇಷವಾದ ಸಂತರ್ಪಣೆ ನಡೆಯಿತು. ಸಿದ್ಧೋಪಂತನು (ಜ್ಞಾನದೇವರ ಅಜ್ಜ) ಮೊಮ್ಮಕ್ಕಳೊಂದಿಗೆ ಅಲ್ಲಿಗೆ ಹೋದ. ಎಲ್ಲರ ಜೊತೆಯಲ್ಲಿ ಈ ಐವರೂ ಊಟಕ್ಕೆಂದು ಎಲೆಗಳ ಮುಂದೆ ಕುಳಿತಿದ್ದರು.

ಈ ಮಕ್ಕಳನ್ನು ಕಂಡು ಕೆಲವರಿಗೆ ನಾಲಗೆ ಸುಮ್ಮನಿರಲಿಲ್ಲ. "ಕುಲಗೆಟ್ಟ ಸಂತಾನ" ಎಂದು ಹಳಿಯತೊಡಗಿದರು. ಸಂನ್ಯಾಸಿಯ ಮಕ್ಕಳು ತಮ್ಮೊಡನೆ ಸಹಪಂಕ್ತಿಯಲ್ಲಿ ಊಟಕ್ಕೆ ಕುಳಿತಿರಕೂಡದು ಎಂದು ಕೆಲವರು ಹಟ ಹಿಡಿದರು. ಈ ಮುದುಕನನ್ನೂ ಮಕ್ಕಳನ್ನೂ ಹೊರಕ್ಕೆ ದಬ್ಬಬೇಕೆಂದೂ ಆರ್ಭಟಿಸಿದರು. ಆಗ ಸಿದ್ಧೋಪಂತನಿಗೂ ಅವರಿಗೂ ಮಾತಿನ ಚಕಮಕಿಯಾಯಿತು. ಕೆಲವರು ಮುನ್ನುಗ್ಗಿ ಸಿದ್ಧೋಪಂತನ ಮೈಮೇಲೆ ಕೈಮಾಡಿದರು. ಏಟು ತಾಗಿ ಆ ಮುದುಕ ನೆಲಕ್ಕೆ ಬಿದ್ದುಬಿಟ್ಟ. ಜ್ಞಾನದೇವ ಇದೆಲ್ಲವನ್ನೂ ನೋಡುತ್ತಿದ್ದ. ಅವನಿಗೆ ಇನ್ನು ಸುಮ್ಮನಿರಲಾಗಲಿಲ್ಲ. ಮುಂದೆ ಬಂದು, "ನೀವೆಲ್ಲ ಏಕೆ ನಮ್ಮಜ್ಜನನ್ನು ಬೈಯುತ್ತಿದ್ದೀರಿ? ನೆಲಕ್ಕೆ ಬೀಳಿಸಿದ್ದೀರಿ? ಅವರು ಮಾಡಿದ ತಪ್ಪಾದರೂ ಏನು?" ಎಂದು ಪ್ರಶ್ನಿಸಿದ.

ಪುಟ್ಟ ಹುಡುಗನ ದಿಟ್ಟ ನುಡಿಗಳನ್ನು ಕೇಳಿ ಅಲ್ಲಿದ್ದವರಿಗೆಲ್ಲ ಅಚ್ಚರಿಯಾಯಿತು. ಆದರೂ ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳದೆ, "ಈ ಎಳೆ ಹುಡುಗನಿಗೆಷ್ಟು ಸೊಕ್ಕು? ಎಷ್ಟೆಂದರೂ ಸಂನ್ಯಾಸಿಯ ಸಂತಾನವಲ್ಲವೇ?" ಎನ್ನುತ್ತಾ ಜ್ಞಾನದೇವನ ಮೇಲೆ ಬೀಳತೊಡಗಿದರು. ಆಗ ಜ್ಞಾನದೇವನು ಸಿಡಿಲ ಮರಿಯಂತೆ ಅವರನ್ನು ಎದುರಿಸಿದನು. ನಿವೃತ್ತಿ, ಸೋಪಾನರೂ ಅವನೊಂದಿಗೆ ಸೇರಿಕೊಂಡರು. ಜ್ಞಾನದೇವನು "ಮುಂದೆ ಕಾಲಿಟ್ಟರೆ ಎಚ್ಚರಿಕೆ!" ಎಂದು ಗರ್ಜಿಸಿದಾಗ ಜನರೆಲ್ಲ ದಂಗಾದರು, ಹೆಜ್ಜೆ ಹಿಂದಕ್ಕಿರಿಸಿದರು.

ಇದರಿಂದಾಗಿ ಜ್ಞಾನದೇವನ ಹೆಸರು ಊರಲ್ಲೆಲ್ಲಾ ಹಬ್ಬತೊಡಗಿತು. "ಆ ಹುಡುಗ ಸಾಮಾನ್ಯನಲ್ಲ, ಧೈರ್ಯ, ಮಾತುಗಾರಿಕೆಗಳಲ್ಲಿ ಅವನ ಮುಂದೆ ಎಲ್ಲರೂ ತಲೆ ತಗ್ಗಿಸಬೇಕು. ಅವನಲ್ಲೇನೋ ವಿಶೇಷವಾದ ಶಕ್ತಿ ಇರಲೇಬೇಕು" ಎಂದು ಜನರು ಮಾತಾಡತೊಡಗಿದರು.